**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 3070/2014** **CW-14** **PW-10**

**ಸಾಕ್ಷಿಯನ್ನು ದಿಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ವಿಜಿಯಮ್ಮ |
| ಗಂಡನ ಹೆಸರುಃ | ಮಲ್ಲೇಶ್ |
| ವಯಸ್ಸುಃ | 45 ವರ್ಷ |
| ವೃತ್ತಿಃ | ಅಂಗನವಾಡಿ ಕಾರ್ಯಕರ್ತೆ |
| ವಾಸ ಸ್ಥಳಃ | ನಾಗರ ನವಿಲೆ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2009 ರಿಂದ ಇಲ್ಲಿಯವರಗೆ ನಾನು ನಾಗರನವಿಲೆ ಬೋವಿ ಕಾಲೋನಿ ಯಲ್ಲಿ ನಾನು ಅಂಗನವಾಡಿ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ನಾವು ಪ್ರತಿ ತಿಂಗಳು ಚನ್ನರಾಯಪಟ್ಟಣ ಸಿಡಿಪಿಒ ಕಛೇರಿಗೆ ಮೀಟಿಂಗ್ ಗೆ ಬರುತ್ತಿದ್ದೆವು. 2009 ರಲ್ಲಿ ಎಂದಿನಂತೆ ನಾವು ಚನ್ನರಾಯಪಟ್ಟಣ ಸಿಡಿಪಿಒ ಕಛೇರಿಗೆ ಮೀಟಿಂಗ್ ಗೆ ಬಂದಿದ್ದು ಆಗ ರಂಗನಾಥ್ ರವರು ಸಿಡಿಪಿಒ ಆಗಿದ್ದರು. ಮಿಟಿಂಗ್ ಗೆ ಸಮನ್ವಯ ಹೆಲ್ತ್ ಎಜುಕೇಶನ್ ಪರವಾಗಿ ಕಾರ್ಯದರ್ಶಿಯಾದ ಚಿದಾನಂದ, ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿಗೆ ಬಂದಿದ್ದು, ಅವರ ಸಂಸ್ಥೆಯಿಂದ ಮೈಕ್ರೋ ಇನ್ಸೂರೆನ್ಸ್ ಯೋಜನೆ ಬಂದಿದ್ದು, ಗ್ರಾಮೀಣ ಕೂಲಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ನಾವು ಏಜೆಂಟರಾದರೆ ಶೇ 3 ರಂತೆ ಹಣ ನೀಡುವುದಾಗಿ ತಿಳಿಸಿ ಹಣ ನೀಡಿದರೆ ಒಂದು ತಿಂಗಳ ಒಳಗಾಗಿ ಪಾಸ್ ಬುಕ್ ಮತ್ತು ಬಾಂಡ್ ಬರುವುದಾಗಿ ತಿಳಿಸಿದ್ದರು. ನಾವೆಲ್ಲರೂ ಒಪ್ಪಿ 2009 ರಲ್ಲಿಯೇ ಎಲ್ ಐ ಸಿ ಕಛೇರಿ ಚನ್ನರಾಯಪಟ್ಟಣಕ್ಕೆ ಹೋಗಿದ್ದು ಆಗ ಚಿದಾನಂದ, ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿದ್ದರು. ಮೈಸೂರು ಎಲ್ ಐ ಸಿ ಪ್ರಧಾನ ಕಛೇರಿಯ ಮ್ಯಾನೇಜರಾದ ವೆಂಕಟೇಶ್ ಮತ್ತು ಕಣ್ಣಿ ರವರು ಅಲ್ಲಿಯೇ ಇದ್ದರು. ನಾವೆಲ್ಲರೂ ಏಂಜೆಂಟರಾಗಿ ಕಾರ್ಯ

ನಿರ್ವಹಿಸಲು ಒಪ್ಪಿದ್ದರಿಂದ ನನಗೆ ಕೋಡ್ ನಂಬರ್ 30 ಎಂದು ನೀಡಿರುತ್ತಾರೆ. ನಂತರ ನಾನು ಸಾರ್ವಜನಿಕರಿಗೆ 2009 ರಿಂದ 2014 ರವರೆಗೆ ಒಟ್ಟು 100 ಪಾಲಿಸಿಗಳನ್ನು ಮಾಡಿಸಿರುತ್ತೇನೆ. ಅವರು ನೀಡಿದ ಹಣವನ್ನು ಚನ್ನರಾಯಪಟ್ಟಣದ ಮೈಕ್ರೋ ಇನ್ಸೂರೆನ್ಸ್ ಕಛೇರಿಗೆ ಪಾವತಿ ಮಾಡುತ್ತಿದ್ದೆವು. ಆ ಸಮಯದಲ್ಲಿ ತ್ಯಾಗರಾಜ್, ಮೋಹನ್, ಮಮತ, ರೋಹನ್, ಬೇಬಿ ರವರು ಪಾಸ್ ಬುಕ್ ಗಳಿಗೆ ನಾವು ನೀಡಿದ ಹಣವನ್ನು ಬರೆದುಕೊಡುತ್ತಿದ್ದರು. ಒಟ್ಟು ಹಣಕ್ಕೆ ಒಂದು ರಶೀದಿಯನ್ನು ಸಹ ನೀಡುತ್ತಿದ್ದರು. ಸದರಿ ಹಣವು ಮೈಸೂರಿನ ಪ್ರಧಾನ ಕಛೇರಿಗೆ ಹೋಗುತ್ತಿತ್ತು. ನಂತರ ಚಿದಾನಂದ್ ರವರ ಕಾರಣಾಂತರಗಳಿಂದ ಸಂಸ್ಥೆಯನ್ನು 2012 ರಲ್ಲಿ ಬಿಟ್ಟಿದ್ದು ನಂತರ ಬಾಳಿಗೊಂದು ಗುರಿ ಸಂಸ್ಥೆಯು ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಅದರಲ್ಲಿ ಕಾರ್ಯದರ್ಶಿಯಾಗಿ ಸಂತೋಷ್ ಅಧ್ಯಕ್ಷರಾಗಿ ಲಿಂಗರಾಜು ರವರು ವಹಿಸಿಕೊಂಡಿದ್ದರು. ನಂತರ ನಾವು ಬಾಳಿಗೊಂದು ಗುರಿ ಸಂಸ್ಥೆಗೆ ಹಣವನ್ನು ಪಾವತಿಸುತ್ತಿದ್ದೆವು. ಹಣವನ್ನು ಕಟ್ಟಿದ ನಂತರ ರಶೀದಿಯನ್ನು ನೀಡುತ್ತಿದ್ದರು. ನಾನು 100 ಪಾಲಿಸಿಗಳಿಂದ ಒಟ್ಟು ರೂ. 1,54,000/- ಕಟ್ಟಿರುತ್ತೇನೆ. ಸದರಿ ಹಣವು ಪ್ರಧಾನ ಕಛೇರಿಗೆ ಕೇವಲ ರೂ. 79,000/- ಪಾವತಿಸಿದ್ದು ಉಳಿದ ರೂ. 75,000/- ರೂಗಳನ್ನು ಸಂತೋಷ್ ಮತ್ತು ಚಿದಾನಂದರವರು ಕಟ್ಟಿರುವುದಿಲ್ಲ ಎಂದು ತಿಳಿಯಿತು. ಇವರನ್ನು ಬಿಟ್ಟರೆ ಬೇರೆ ಯಾರು ಗೊತ್ತಿಲ್ಲ. ನಂತರ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದು, ಇದರ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಹೇಳಿಕೆಯೊಂದಿಗೆ ನಾನು ಮಾಡಿಸಿದ್ದ ಪಾಲಿಸಿದಾರರ ಹೆಸರು ಮತ್ತು ಸಂಪೂರ್ಣ ವಿವರವನ್ನು ಪೋಲೀಸರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಪೋಲೀಸರಿಗೆ ತಾನು ನೀಡಿದ್ದ ವರದಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-34 ಎಂದು ಗುರುತಿಸಲಾಯಿತು.(4 ಪುಟ)

ನಿಪಿ-34 ರಲ್ಲಿರುವ ಬರವಣಿಗೆ ನನ್ನದೇ ಆಗಿರುತ್ತದೆ.

ಆರೋಪಿತರನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನ್ಯಾಯಾಲಯದಲ್ಲಿರುವ 1ನೇ ಆರೋಪಿಯನ್ನು ತೋರಿಸಲಾಗಿ ಇವರೇ ಚಿದಾನಂದ್ ಎಂದರೆ ಸರಿ ಎನ್ನುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ**

ಮೊದಲು ಮೀಟಿಂಗ್ ಮಾಡಿದ ದಿಃ 03.02.2009. ನನಗೆ ಸಂಭಳ ಚೆಕ್ ಮೂಲಕ ಬರುತ್ತಿತ್ತು ಎಂದರೆ ಸರಿ. 1ನೇ ಆರೋಪಿ ನಮಗೆ ನೀಡಿದ 12 ರಶೀದಿಗಳನ್ನು ಪೋಲೀಸರಿಗೆ ನೀಡಿದ್ದೇನೆ. 12 ರಶೀದಿಯ ಒಟ್ಟು ಮೊತ್ತ ನೆನಪಿಲ್ಲ. ನಾನು 1ನೇ ಆರೋಪಿಗೆ ರೂ. 3,600/- ನೀಡಿದ ಬಗ್ಗೆ ಪೋಲೀಸರಿಗೆ ರಶೀದಿಯನ್ನು ನೀಡಿದ್ದೇನೆ. ಯಾರಿಗೂ ನಾನು ಯಾವುದೇ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಜನರಿಗೆ ಹಣವನ್ನು ಹಿಂದುರುಗಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಶೀದಿಗಳನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**